ಉದ್ದುಸೆಗೆ ಲಿಫ್ಟ್ ಇರಿಗೇಷನ್ ಮಂಜೂರು ಮಾಡುವ ಬಗ್ಗೆ

೨೦. ಶ್ರೀಮತಿ ಮೋಟಮ್ಮ (ಮೂಡಿಗೆರೆ).—ಮಾನ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮೂಡಿಗೆರೆ ತಾಲ್ಲೂಕಿನ ಉದ್ದುಸೆಗೆ ಏತ ನೀರಾವರಿ ಅಗತ್ಯ ಇರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಇದನ್ನು ಮಂಜೂರು ಮಾಡದಿರಲು ಕಾರಣಗಳೇನು ?

ಇ) ಇದರಿಂದ ಎಷ್ಟು ಎಕರೆ ಜಮೀನಿಗೆ ನೀರು ಒದಗಿಸಬಹುದು ?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು).—

ಅ) ಬಂದಿದೆ.

ಆ) ಈ ಯೋಜನೆಗೆ ಕಾವೇರಿ ಜಲಾನಯನ ಏತ ನೀರಾವರಿ ನಿಗಮದಿಂದ ರೂ. ೨೨.೨೦ ಲಕ್ಷ ಅಂದಾಜಿಗೆ ಆಡಳಿತಾತ್ಮಕ ಮಂಜೂರಾತಿ ದೊರೆತಿದೆ. ಈ ಯೋಜನೆಗೆ ಅಗತ್ಯವಾಗಿ ಬೇಕಾಗಿರುವ ನೀರಿಗೆ ಪರವಾನಿಗೆ ನೀಡಿರುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಇ) ಈ ಯೋಜನೆಯಿಂದ ೩೧೦ ಎಕರೆ ಜಮೀನನ್ನು ನೀರಾವರಿಗೆ ಒದಗಿಸಬಹುದಾಗಿದೆ.

ಕೋಮಯ ಗಲಭೆಗಳನ್ನು ಪ್ರಚೋದಿಸುವವರ ವಿರುದ್ಧ ಕ್ರಮ

೭೭. ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಇತ್ತೀಚಿನ ಕೋಮು ಗಲಭೆಗಳಲ್ಲಿ ಸಮಾಜ ಘಾತುಕ ಶಕ್ತಿಗಳ ಕೈವಾಡವಿದೆಯೇ ?

ಆ) ಸರ್ಕಾರ ಈ ಸಂಬಂಧವಾಗಿ ಇದುವರೆವಿಗೆ ಎಷ್ಟು ಜನರನ್ನು ಬಂಧಿಸಿದೆ ?

ಇ) ಇನ್ನು ಮುಂದು ಇಂತಹ ಕೋಮು ಗಲಭೆಗಳನ್ನು ತಪ್ಪಿಸಲು ಸರ್ಕಾರದು ಪ್ರತಿಯೊಂದ ತಾಲ್ಲೂಕಿಗೂ ಒಂದೊಂದು ಖಾಯಂ ಶಾಂತಿ ಸಮಿತಿಗಳನ್ನು ನೇಮಿಸಲು ಕ್ರಮ ಕೈಕೊಳ್ಳುತ್ತದೆಯೇ

ಶ್ರೀ ಧರ್ಮ ಸಿಂಗ್ (ಗೃಹ ಸಚಿವರು).—

ಅ) ಹೌದು

ಆ) ೧೬.೦೪೩,

ಇ) ಕೈಗೊಂಡಿದೆ. ಈಗಾಗಲೇ ಶಾಂತಿ ಪಾಲನಾ ಸಭೆಗಳು ಕೆಲಸ ಮಾಡುತ್ತಿವೆ.

ರಾಜ್ಯದಲ್ಲಿ ಕೋಮು ಗಲಭೆಗಳಲ್ಲಿ ಸತ್ತವರ ಸಂಖ್ಯೆ

೭೪. ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಇತ್ತೀಚೆಗೆ ಸಂಭವಿಸಿದ ಕೋಮು ಘರ್ಷಣೆಯಲ್ಲಿ ಸತ್ತವರ ಸಂಖ್ಯೆ ಎಷ್ಟು ? (ತಾಲ್ಲೂಕುವಾರು ಮಾಹಿತಿ ನೀಡುವುದು)

ಆ) ಇದರಲ್ಲಿ ಗೋಲಿಬಾರಿನಿಂದ ಸತ್ತವರ ಸಂಖ್ಯೆ ಎಷ್ಟು ?

ಇ) ಈ ಗಲಭೆಗಳಲ್ಲಿ ಸತ್ತವರಿಗೆ ಹಾಗೂ ಪೋಲೀಸರ ಗೋಲಿಬಾರಿನಲ್ಲಿ ಸತ್ತವರಿಗೆ ಸರ್ಕಾರ ಇದುವರೆವಿಗೆ ನೀಡಿದ ಪರಿಹಾರದ ಮೊತ್ತವೆಷ್ಟು ?